ಸಾಕ್ಷಿಯನ್ನು ದಿ: 12.09.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ - 2

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ಏಳನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿ ದಾವಾ ಆಸ್ತಿಗೆ ತೊಂದರೆ ಕೊಟ್ಟ ಕಾರಣ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ. ನಾನು 1 ನೇ ವಾದಿಯ ತಂಗಿಯನ್ನು ಮದುವೆಯಾಗಿರುತ್ತೇನೆ. ದಾವಾ ಆಸ್ತಿಯ ಅಕ್ಕಪಕ್ಕ ನನಗೆ ಸೇರಿದ ಯಾವುದೇ ಜಮೀನಿರುವುದಿಲ್ಲ. ದಾವಾ ಆಸ್ತಿಯನ್ನು ನಾನೇ ನನ್ನ ಮಾವ ರಾಮಯ್ಯನಿಗೆ ನಂಜೇಗೌಡನದೊಡ್ಡಿ ಶಿವಪ್ಪನಿಂದ ಕೊಡಿಸಿರುತ್ತೇನೆ. ಸುಮಾರು 18 – 20 ವರ್ಷಗಳ ಹಿಂದೆ ದಾವಾ ಆಸ್ತಿಯನ್ನು ಖರೀದಿ ಮಾಡಲಾಗಿದೆ. ದಾವಾ ಆಸ್ತಿ ಸರ್ವೆ ನಂ.51. ಸರ್ವೆ ನಂ.51 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನಿರುತ್ತದೆ ಗೊತ್ತಿಲ್ಲ. ರಾಮಯ್ಯ ದಾವಾ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಸರ್ವೆ ನಂ.51 ರಲ್ಲಿ ಎಷ್ಟು ಜನ ಖರೀದಿ ಮಾಡಿದ್ದರು ಗೊತ್ತಿಲ್ಲ. ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಪಂಪ್ ಸೆಟ್ಟ್ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆಃ ಹಳ್ಳ, ಪಶ್ಚಿಮ ಮತ್ತು ಉತ್ತರಕ್ಕೆಃ ಪುಟ್ಟಮಾದಶೆಟ್ಟಿ, ದಕ್ಷಿಣಕ್ಕೆಃ ಸವಡೆ ಮರಿಸ್ವಾಮಿ ಜಮಿನು. ಪುಟ್ಟಮಾದಶೆಟ್ಟಿ ಮತ್ತು ಸವಡೆ ಮರಿಸ್ವಾಮಿ ಜಮೀನುಗಳ ಸರ್ವೆ ನಂಬರ್ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಜಮೀನುಗಳು ಇರುತ್ತವೆ ಗೊತ್ತಿಲ್ಲ. ಸದರಿಯವರು ಯಾರಿಂದ ಜಮೀನು ಕೊಂಡುಕೊಂಡಿರುತ್ತಾರೆಂದು ಗೊತ್ತಿಲ್ಲ. ಪುಟ್ಟಮಾದಶೆಟ್ಟಿ ನಂಜೇಗೌಡನದೊಡ್ಡಿ ಶಿವಪ್ಪನಿಂದ ಪಂಪ್ ಸೆಟ್ ಹಾಕಿಸುವ ಸಲುವಾಗಿ 2 ಗುಂಟೆ ಜಮೀನಿನನ್ನು ಕೊಂಡುಕೊಂಡಿದ್ದರು ಎಂದರೆ ಸರಿ. ಪ್ರತಿವಾದಿಯೂ ಸಹ 1995 ರಲ್ಲಿ ಸದರಿ ಶಿವಪ್ಪನಿಂದ 1 ಗುಂಟೆ ಜಮೀನನ್ನು ಪಂಪ್ ಸೆಟ್ ಹಾಕಿಸುವ ಸಲುವಾಗಿ ಜಮೀನು ಪಡೆದಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ಜಮೀನು ಖರೀದಿ ಮಾಡಿದ್ದರೂ ಸಹ ಖರೀದಿ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಗ್ರಾಮದ ಶಿವಣ್ಣನೂ ಸಹ ಸದರಿ ನಂಜೇಗೌಡನದೊಡ್ಡಿ ಶಿವಪ್ಪನಿಂದ 1 ½ ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಶಿವಪ್ಪನಿಂದ ಜಮೀನು ಖರೀದಿ ಮಾಡಿ ಸದರಿ ಜಮೀನಿನಲ್ಲಿ ಪಂಪ್ ಸೆಟ್ ಗಾಗಿ ಪೈಪುಗಳನ್ನು ಅಳವಡಿಸಿದ್ದರು ಎಂದರೆ ಸರಿಯಲ್ಲ. ಸದರಿ ಪೈಪ್ ಲೈನ್ ಮುಖಾಂತರ ಪ್ರತಿವಾದಿ ಬೆಳೆಗಳಿಗೆ ನೀರನ್ನು ಹಾಯಿಸಿಕೊಂಡು ಬೆಳೆ

ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಸುಮಾರು ವರ್ಷಗಳಾದ ಕಾರಣ ಸದರಿ ಪೈಪುಗಳು ಹೊಡೆದು ನೀರು ಸರಬರಾಜು ಮಾಡಿಕೊಳ್ಳಲು ಪ್ರತಿವಾದಿಗೆ ಕಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಹೊಸದಾಗಿ ಪೈಪ್ ಲೈನ್ ಅಳವಡಿಸಲು ಪ್ರತಿವಾದಿ ತಹಸಿಲ್ದಾರರಿಂದ ಪರವಾನಗಿಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ನಾನು ಪ್ರತಿವಾದಿ ಮಾತನಾಡುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಯ ವಿರುದ್ಧ ದ್ವೇಷದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ನಾವೆಲ್ಲರೂ ಸೇರಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಯು ಪೈಪು ಕಿತ್ತು ಹಾಕುವುದು ಮತ್ತು ವಾದಿಯರ ಬೆಳೆಯನ್ನು ನಾಶಪಡಿಸಲು ಪ್ರಯತ್ನ ಮಾಡಿರುತ್ತಾನೆ. ಪ್ರತಿವಾದಿಯ 1 ಗುಂಟೆ ಜಮೀನಿನ 3 ಕಡೆ ವಾದಿಯರ ಜಮೀನಿರುತ್ತದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿ ಪೈಪ್ ಲೈನ್ ಅಳವಡಿಸಿಕೊಳ್ಳಲು ಜಮೀನು ಖರೀದಿ ಮಾಡಿದ ಬಗ್ಗೆ ಗೊತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಒಂದು ಗುಂಟೆಯಲ್ಲಿ ಪೈಪ್ ಲೈನ್ ಅಳವಡಿಸಿದ ಬಗ್ಗೆ ಗುರುತಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಲು ನನಗೆ ಯಾವುದೇ ತೊಂದರೆಯಿಲ್ಲ. ಪ್ರತಿವಾದಿ ಯಾವತ್ತೂ ವಾದಿಯರಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವೇ ಪ್ರತಿವಾದಿಗಳಿಗೆ ಹೊಸ ಪೈಪ್ ಅಳವಡಿಸಿಕೊಳ್ಳಲು ತೊಂದರೆ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಾನೇ ವಾದಿಯರಿಗೆ ಕುಮ್ಮಕ್ಕು ಕೊಟ್ಟು ಪ್ರತಿವಾದಿಗೆ ಆರ್ಥಿಕವಾಗಿ ನಷ್ಟವನ್ನುಂಟು ಮಾಡಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ